

ಕಾಣಲು ಸಿಗುತ್ತದೆ. 'ಸ್ಲೆಂಡರ್ ಲೋರಿಸ್' ಎಂಬ ಈ ಜೀವಿಯ ನೋಟವೇ ಒಂದು ವಿಸ್ಮಯ. ಇದರ ಕಣ್ಣು, ಕೈ ಕಾಲುಗಳು ಮನುಷ್ಯರ ಮಗುವಿನಂತೆಯೇ ಇವೆ. ಬಿದಿರಿನ ಪೊಟರೆಗಳಲ್ಲಿ ವಾಸ ಮಾಡಲಿಚ್ಛಿಸುವ ಇವು, ಸಾಮಾನ್ಯವಾಗಿ ಕೀಟ, ಎಲೆ, ಮತ್ತು ಹಣ್ಣುಗಳನ್ನು ತಿನ್ನುತ್ತವೆ. ಗೊಂಡೆಹುಳುಗಳು ಮತ್ತು ಕೆಲವೊಮ್ಮೆ ಪಕ್ಷಿಗಳ ಮೊಟ್ಟೆಗಳನ್ನು ಗುಳುಂ ಮಾಡುವುದುಂಟು.

ವಿಚಿತ್ರ ಅಭ್ಯಾಸವೆಂದರೆ, ಇವು ತಮ್ಮದೇ ಮೂತ್ರದಲ್ಲಿ ಮುಖ ಮತ್ತು ಕೈಕಾಲುಗಳನ್ನು ತೊಳೆದುಕೊಳ್ಳುತ್ತವೆ. ಪ್ರಕೃತಿ ಇದಕ್ಕೆ ಕೊಟ್ಟಿರುವ ರಕ್ಷಾಕವಚವೇ ಈ ಮೂತ್ರ ಸ್ನಾನ. ಈ ಕಾರಣಕ್ಕೋ ಏನೋ, ತೀರಾ ಹತ್ತಿರ ಹೋದರೆ ಗಬ್ಬುನಾತ ಮೂಗಿಗೆ ಮೊಟಕುತ್ತದೆ. ವಿಷಕಾರಿ ಕೀಟಗಳ ಬೇಟೆಯಾಡುವಾಗ ಇವುಗಳ ಮೈಕೈಗಳಿಗೆ, ಸಾವಿನ ದವಡೆಯಲ್ಲಿರುವ ಆ ಕೀಟಗಳು ಕುಟುಕುವ ಸಂಭವ ಇದ್ದೇ ಇರುತ್ತದೆ. ತನ್ನ ಪ್ರಾಣ ಉಳಿಸಿಕೊಳ್ಳಲು ಪ್ರತಿ ಜೀವಕ್ಕೂ ಪ್ರಕೃತಿ ಒಂದಲ್ಲಾ ಒಂದು ಬಗೆಯ ರಕ್ಷಣಾ ತಂತ್ರಗಳನ್ನು ಕಲಿಸಿಕೊಟ್ಟಿದೆ. ಅದರ ಪ್ರಕಾರ, ಕಾಡುಪಾಪಕ್ಕೆ ಎದುರಾಳಿಯಿಂದ ಆಗುವ ದಾಳಿ ಮತ್ತು ನೋವನ್ನು ಶಮನ ಮಾಡಿಕೊಳ್ಳಲು, ಈ ಸ್ವಮೂತ್ರ ಪ್ರೋಕ್ಷಣೆಯ ಒಂದು ಅಸ್ತ್ರ ಸಿಕ್ಕಿದೆ.

ಈ ಪ್ರಾಣಿಗಳು ಉದ್ದವಾದ ತೆಳ್ಳಗಿನ ತೋಳುಗಳನ್ನು ಹೊಂದಿವೆ. ತೂಕ ಸುಮಾರು ಅರ್ಧ ಕೇಜಿಯ ಆಸುಪಾಸು. ಕಂಡೂ ಕಾಣದಂತಹ ಬಾಲವಿದೆ. ಇದರ ಕಂದು ಕಣ್ಣುಗಳು ಸುಂದರ ಮತ್ತು ಪ್ರಕಾಶಮಾನ. ಜೀವನದ ಬಹುಪಾಲು ಮರಗಳ ಮೇಲೆ ಕಳೆಯುವ ಇದರ ಚಲನೆಗಳು ಅತ್ಯಂತ ನಿಧಾನ.

ಕಾಡುಪಾಪಗಳು ವರ್ಷಕ್ಕೆ ಎರಡು ಬಾರಿ ಮರಿ ಹಾಕುತ್ತವೆ. ಏಪ್ರಿಲ್‌ನಿಂದ ಮೇ ಮತ್ತು